# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಎರಡನೆಯ ಆವರ್ತಕ ಪರೀಕ್ಷೆ ಸೆಪ್ಟೆಂಬರ್ - 2020

ತರಗತಿ : 8 ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : 20

**(Use KANNADA H W Note Book to ANSWER)**

ವಿಭಾಗ ಎ (ವಾಚನ ಮತ್ತು ಗ್ರಹಿಕಾ ಕೌಶಲ) : 4 ಅಂಕಗಳು

1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಕನ್ನಡಿಗರ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ಡಾ.ರಾಜಕುಮಾರ್ ಅವರು 1929ರ ಏಪ್ರಿಲ್ 24ರಂದು ಜನಿಸಿದರು. ಗಾಜನೂರು ಇವರ ಹುಟ್ಟೂರು. ಇವರ ತಂದೆ ಶ್ರೀ ಪುಟ್ಟಸ್ವಾಮಯ್ಯನವರ. ತಾಯಿ ಶ್ರೀಮತಿ ಲಕ್ಷ್ಮಮ್ಮನವರು. ಮಳೆಯೇ ಇಲ್ಲದೆ ಭೂಮಿ ಬಿಸಿಲಿನ ಬೇಗೆಯಿಂದ ಬಳಲಿದ್ದ ಒಂದು ದಿನ. ಜೋರಾಗಿ ಮಳೆ ಸುರಿಯತೊಡಗಿತು. ಬಿಸಿಲಿನ ತಾಪಕ್ಕೆ ಕಂಗೆಟ್ಟಿದ್ದ ಜನರಿಗೆ ವರ್ಷಧಾರೆಯು ಹರುಷ ತಂದಿತು.. ಭೂಮಿಯೂ ತಂಪಾಯಿತು. ಇಂತಹ ತಣ್ಣನೆಯ ಹೊತ್ತಿನಲ್ಲೆ ಶ್ರೀಮತಿ ಲಕ್ಷ್ಮಮ್ಮನವರು ಗಂಡು ಮಗುವನ್ನು ಹೆತ್ತರೆಂಬ ಸುದ್ದಿ ಬಂತು. ಇಳೆಗೆ ಮಳೆಯನ್ನು ಕರೆತಂದ ಕಂದನೆಂದೇ ಊರ ಜನ ಸಂಭ್ರಮಿಸಿದರು. ತಾವು 'ಮುತ್ತತ್ತಿರಾಯ'ನಿಗೆ ಹೊತ್ತ ಹರಕೆಯಿಂದಲೇ ಗಂಡು ಮಗು ಜನಿಸಿತೆಂಬ ಸಂಭ್ರಮದಿಂದ ಮಗನ ಹೆಸರಿನಲ್ಲಿ 'ರಾಜು' ಎಂಬ ಪದವಿರಬೇಕೆಂಬ ಆಸೆ ತಂದೆ-ತಾಯಿಯರದು. ಮುತ್ತುರಾಯನ ವರಪ್ರಸಾದವಾದ್ದರಿಂದ 'ಮುತ್ತು' ಮತ್ತು ತಮ್ಮಾಸೆಯ ಸೆಳೆತದಂತೆ 'ರಾಜು' ಎಂಬುದನ್ನು ಸೇರಿಸಿ ಮಗುವಿಗೆ 'ಮುತ್ತುರಾಜು' ಎಂದು ನಾಮಕರಣ ಮಾಡಲಾಯಿತು.

ಪ್ರಶ್ನೆಗಳು:
1 ) ಡಾ.ರಾಜಕುಮಾರ್ ಅವರು ಜನಿಸಿದ್ದು ಯಾವಾಗ? 1
2 ) ರಾಜಕುಮಾರರ ಹುಟ್ಟೂರು ಯಾವುದು? 1
3 ) ರಾಜಕುಮಾರ್ ಅವರ ತಂದೆ-ತಾಯಿಯ ಹೆಸರೇನು? 1
4 ) ರಾಜಕುಮಾರ್ ಅವರಿಗೆ ಮೊದಲು ಏನೆಂದು ನಾಮಕರಣ ಮಾಡಲಾಗಿತ್ತು? 1

ವಿಭಾಗ -ಬಿ (ಬರವಣಿಗೆಯ ಕೌಶಲ) : 3 ಅಂಕಗಳು

2) ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮವನ್ನು ಕುರಿತು ನಿಮ್ಮ ತಂದೆ/ತಾಯಿಗೆ ಒಂದು ಪತ್ರ ಬರೆಯಿರಿ 3

ವಿಭಾಗ - ಸಿ (ಅನ್ವಯಿಕ ವ್ಯಾಕರಣ) : 5 ಅಂಕಗಳು

3) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:
1) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: 1) ಪುಸ್ತಕವನ್ನು 2) ಮೈದೊಳೆ 2
2) ಈ ಪದಗಳಿಗೆ ದ್ವಿರುಕ್ತಿ ಪದಗಳನ್ನು ಬರೆಯಿರಿ: 1) ಸಣ್ಣ 2) ನಡೆ 1
3) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ: 1) ಮನರಂಜನೆ 2) ವ್ಯಾಪಾರ 2

ವಿಭಾಗ - ಡಿ (ಪಠ್ಯಗಳ ಅಧ್ಯಯನ) : 8 ಅಂಕಗಳು

4. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 6

1. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
ಎ) ಇಪ್ಪತ್ತಕ್ಕೂ ಹೆಚ್ಚು ಬಿ) ಎರಡು ಸಿ) ಹತ್ತು ಡಿ) ಐದು
2. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?
ಎ) ಬಿರುದು ನೀಡುವ ಬಿ) ಜಾತ್ರೆ ಮಾಡುವ ಸಿ) ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಡಿ) ಪೂಜೆ ಮಾಡುವ
3. ಅಬ್ದುಲ್ ರಹೀಮನ ಹರಕೆವೇನು?
ಎ) ಮಕ್ಕಳಿಗೆ ಸರಕಾರಿ ನೌಕರರನ್ನಾಗಿ ಮಾಡುವುದು ಬಿ) ಮನೆ ಬಿಡಿಸುವುದು ಸಿ) ಮಗ್ಗದ ಕೆಲಸ ಮಾಡುವ ಡಿ) ಹಣ ಮಾಡುವ
4. ಅಬ್ದುಲ್ ರಹೀಮನಿಗೆ ___________ ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು.
ಎ) ರಹೀಮಣ್ಣ ಬಿ) ಮಗ್ಗದ ಸಾಹೇಬ ಸಿ) ಬಹದ್ದೂರ್ ಡಿ) ಮಾಸ್ತರ್
5. ಸಣ್ಣ ಸಂಗತಿ ಪಾಠವನ್ನು ಬರೆದ ಕವಿ ಯಾರು?
ಎ) ಕೆ.ಎಸ್ ನರಸಿಂಹಸ್ವಾಮಿ ಬಿ) ದ.ರಾ.ಬೇಂದ್ರೇ ಸಿ) ಅನುಪಮಾ ನಿರಂಜನ ಡಿ) ಡಿ.ಎಸ್.ಕರ್ಕಿ
6. ಮಗ್ಗದ ಸಾಹೇಬ ಪಾಠವನ್ನು ಬರೆದ ಲೇಖಕರು ಯಾರು?
ಎ) ಭಾಗಲೋಡಿ ದೇವರಾಯ ಬಿ) ಕುವೆಂಪು ಸಿ) ಡಿ.ವಿ.ಜಿ ಡಿ) ದಿನಕರ ದೇಸಾಯಿ

5. ಕೊಟ್ಟಿರುವ ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 2
1) ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?

*****

**SEND THE PHOTO or PDF of this ANSWER SHEET to**

**Mr.H.K.Makari Sir on 8197183534**